day. One distinct advantage is that any question which the members feel very important may be taken up and supplementaries put if they so mind.

I would, therefore, appeal to the Hon'ble Members in their own interest and in the interest of quick and efficient despatch of work to assist the Chair in disposing of all or as many as possible of the questions in the daily lists. I may state that in the Parliament of England as many as 45 to 50 questions are disposed of during question-time and nearly as many questions in the Indian Parliament. If Hon'ble Members will kindly remember that question-time is only intended to elicit information and not to carry on a discussion or even to make suggestions to Government and if they would limit their supplementaries only for the purpose of further elucidating any matter of fact regarding which an answer has been given, as stated in Rule 33, I am sure we will be able to finish all the questions in the daily lists and Hon'ble Members whose questions appear at the end of the list will have the satisfaction of having their questions taken up and putting supplementaries if necessary.

I may also invite the reference of all the Hon'ble Members to discussion on any matter of sufficient public importance which has been the subject of a question, which is provided for, for the first time under Rule 39. This new provision should also enable the number of supplementaries being cut short to the barest minimum.

*Mushir-ul-Mulk J. MOHAMED IMAM (Tumkur *cum* Chitaldrug—Muslim).—May I submit one point to the Chair? I agree to the views expressed by the Chair that we must dispose of as many questions as possible and we must cut short our supplementaries to the barest minimum. I had an opportunity of witnessing the proceedings of the Parliament in England and on the day I visited as many as 48 questions were disposed of. If the procedure that was adopted there were to be adopted in this House also, I think that will minimise the number of supplementaries. There as soon as a question is taken up, the Minister or the Secretary concerned makes a full statement regarding the issue raised without concealing any fact. It is on account of that statement a few supplementaries are asked. But here I find very many supplementary questions. That is because the Hon'ble Ministers either hesitate to give full answers or they say that the answer cannot be given in public interest or in the interest of justice or they plead notice.

The Hon'ble Sri H. C. DASAPPA (Minister for Finance and Industries).—That is what the Hon'ble Member was doing perhaps when he was Minister.

Janab J. MOHAMED IMAM.—I was present at the Parliament for two days. I never saw any Minister pleading notice. They give full facts. That is why—they are so businesslike in the Parliament—very few questions are asked. If the same procedure is adopted here also and if they place all the facts before us, it would avoid the asking of more supplementaries; otherwise, I think it will be inevitable for us to take more time.

QUESTIONS AND ANSWERS.

Mr. SPEAKER (The Hon'ble Sri V. Venkatappa).—Questions for answers will be taken up for one hour.

Off-take figures in 1950 in rationed and non-rationed areas.

Q.—12. Sri M. GOVINDA REDDY (Chitaldrug District—General):—

Will the Government be pleased to state:—

the off-take figures for each month in the year 1950 in (i) statutory rationed area and (ii) in the non-statutory rationed area with rationed population in both the areas for that year?

* Asterisk indicates that the speeches and other observations have not been returned by Members concerned approved.

A.—**The Hon'ble Sri K. CHENGALARAYA REDDY** (Chief Minister) :—
(i) and (ii).

Serial Number	Months	Rationed Areas				Non-Rationed Areas			
		Population	Off-take (Pallas)			Population	Off-take (Pallas)		
			Rice	Wheat	Millets		Rice	Wheat	Millets
1	January 1950 ...	11,03,113	48,559	24,173	14,262	40,48,477	49,695	20,860	24,938
2	February ,, ...	11,17,133	45,701	24,118	12,613	38,96,558	53,021	21,385	27,227
3	March ,, ...	11,30,641	46,743	26,685	15,162	38,85,827	55,922	20,668	19,489
4	April ,, ...	11,36,951	45,758	21,167	17,155	39,04,432	57,092	13,383	30,495
5	May ,, ...	11,42,760	53,337	12,198	21,161	39,26,145	63,478	10,160	30,620
6	June ,, ...	11,44,446	46,606	23,388	20,088	40,74,987	59,129	10,053	37,152
7	July ,, ...	11.35,138	46,054	23,777	19,928	41,35,197	61,154	15.225	44,176
8	August ,, ...	11,45,558	38,276	37,153	20,490	41,67.629	60.581	27,411	45,499
9	September ,, ...	11,52,722	37,898	31,743	19,777	41,90,136	61,136	29,679	46,715
10	October ,, ...	11,53,246	38,108	33,636	19,679	41,92,350	61,448	31,646	47,551
11	November ,, ...	11,61,983	38,699	34,121	20,672	41,98,970	62,345	31,481	46,241
12	December ,, ...	11,63,390	38,717	32,035	20,006	41,80,032	60,351	28,307	40,986
	Total ...	...	524,706	327,191	220,992	...	705,342	260,258	441,079

N B.—By population is meant the number of people to whom rations are issued by Government (the adult equivalent of children is calculated and shown.)

ಶ್ರೀ ಎಂ. ಗೋವಿಂದರೆಡ್ಡಿಯವರು.—ನಾನು ಕೇಳಿರತಕ್ಕ ಪ್ರಶ್ನೆಗೆ ಕೊಟ್ಟಿರತಕ್ಕ ಅಂಕಿಗಳು ಪ್ರತಿ ತಿಂಗಳಲ್ಲಿಯೂ ಅವರಿಗೆ ಅವರ ರೇಷ್ಷ್ ಕಾರ್ಡಿನಲ್ಲಿ ನಮೂದಿಸಿರತಕ್ಕ ಪ್ರಮಾಣಕ್ಕನುಸಾರವಾಗಿ ಕೊಟ್ಟಿರತಕ್ಕ ಅಂಕಿಗಳೇ ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಾವು ಕೇಳಿರತಕ್ಕ off-take figures ಇಲ್ಲಿ ತಿಳಿಸಲಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈಗ ತಾವು ಇಲ್ಲಿ ಸೂಚಿಸಿರುವ ಅಂಕಿಗಳು ಕೇವಲ ರೇಷ್ಷ್‌ಕಾರ್ಡುಗಳ ಮೇರೆ ಕೊಟ್ಟಿರತಕ್ಕ ಆಹಾರಧಾನ್ಯಗಳನ್ನು ಮಾತ್ರ ಸೂಚಿಸುತ್ತವೆಯೋ ಅಥವಾ ರೇಷ್ಷ್ ಕಾರ್ಡುಗಳಿಲ್ಲದವರಿಗೆ ಕೊಡಲಾದ ಧಾನ್ಯವನ್ನೂ ಸೂಚಿಸುತ್ತವೆಯೋ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಒಂದನೆಯ ಕಲಂನಲ್ಲಿ ಸೂಚಿಸಿರುವುದೆಲ್ಲಾ ರೇಷನಿಂಗ್ ಏರ್ಪಾಡು ಜಾರಿಯಲ್ಲಿರತಕ್ಕ ಪ್ರದೇಶಗಳಿಗೆ ಕೊಡಲಾದ ಧಾನ್ಯಗಳ ಪ್ರಮಾಣವನ್ನು ಸೂಚಿಸುವ ಸಂಖ್ಯೆ. ಎರಡನೆಯ ಕಲಂನಲ್ಲಿ ಸೂಚಿಸಿರುವುದೆಲ್ಲಾ ರೇಷನಿಂಗ್ ಏರ್ಪಾಡು ಜಾರಿಯಲ್ಲಲ್ಲದಿರತಕ್ಕ ಪ್ರದೇಶಗಳಿಗೆ ಒದಗಿಸಿರುವ ಧಾನ್ಯಗಳ ಪ್ರಮಾಣವನ್ನು ಸೂಚಿಸುವ ಸಂಖ್ಯೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ರೇಷ್ಷ್ ಕಾರ್ಡುಗಳ ಮೇಲೆ ಮಾತ್ರ ಧಾನ್ಯಗಳನ್ನು ಕೊಡಲಾಗಿದೆಯೋ ಅಥವಾ ರೇಷ್ಷ್ ಕಾರ್ಡುಗಳು ಇಲ್ಲದಿದ್ದವರಿಗೂ ಧಾನ್ಯಗಳನ್ನು ಕೊಡಲಾಗುತ್ತದೆಯೋ ಎಂಬ ಅಂಶವನ್ನು ನಾನು ಈಗ ತಿಳಿದುಕೊಳ್ಳಬೇಕಾಗಿದೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಾರ್ಡುಗಳಿಲ್ಲದವರಿಗೆ ಧಾನ್ಯಗಳನ್ನು ಕೊಡುತ್ತಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ವ್ಯವಸಾಯಗಾರರನೇಕರಿಗೆ ಬತ್ತದ ಬೆಳೆ ಇಲ್ಲದೆ, ಅವರಿಗೆ ಅಕ್ಕಿಯ ಅವಶ್ಯಕತೆಯಿದ್ದರೂ, ರೇಷ್ಷ್ ಕಾರ್ಡಿಲ್ಲದೆ ಇದ್ದಂಥ ಸಂದರ್ಭಗಳಲ್ಲಿ ಅಂಥವರಿಗೆ ಅಕ್ಕಿಯನ್ನೊದಗಿಸಲು ಸರ್ಕಾರದವರು ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ವ್ಯವಸಾಯಗಾರರಾಗಿದ್ದು, ಯಾರು ಕಡಿತರ ಪದ್ಧತಿಗೊಳಗಾಗಿರುವ ಧಾನ್ಯಗಳನ್ನು ಬೆಳೆಯುವುದಿಲ್ಲವೋ ಅಂಥವರಿಗೂ ರೇಷ್ಷ್ ಕಾರ್ಡುಗಳನ್ನು ಕೊಡಲಾಗಿದೆ. ರೇಷ್ಷ್ ಕಾರ್ಡುಗಳಿಲ್ಲದೆ ಯಾರಿಗೂ ಧಾನ್ಯವನ್ನು ಕೊಡುತ್ತಿಲ್ಲ. ಹಾಗೆ ಕೊಡುವುದಕ್ಕೆ ಅವಕಾಶವೂ ಇಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅನೇಕರು ಅಕ್ಕಿಯನ್ನು ಬೆಳೆಯುತ್ತಿಲ್ಲ. ಅವರು ವ್ಯವಸಾಯಗಾರರೇ ಆಗಿದ್ದಾಗ್ಯೂ, ಆ ಬೆಳೆ ತೆಗೆಯಲು ಅವರಿಗೆ ಅನುಕೂಲತೆಗಳಿಲ್ಲದೆ ಇದ್ದು, ಅಂಥವರಿಗೆ ಹಬ್ಬ, ಹುಣ್ಣಿಮೆಗಳ ಕಾಲದಲ್ಲಿ ಮತ್ತು ಬಾಣಂತನದ ಕಾಲದಲ್ಲಿ ತಾವು ಅಕ್ಕಿಯನ್ನೊದಗಿಸಲು ಏನು ಏರ್ಪಾಡುಮಾಡಿದ್ದೀರಿ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಧ್ಯಕ್ಕೆ ಅವರಿಗೆ ಯಾವ ಏರ್ಪಾಡನ್ನೂ ಮಾಡಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅವರಿಗೂ ಅಕ್ಕಿಯ ಅವಶ್ಯಕತೆ ಹೆಚ್ಚಾಗಿರುವುದರಿಂದ, ಅದನ್ನು ಒದಗಿಸಲು ತಾವು ತಕ್ಕ ವ್ಯವಸ್ಥೆಯನ್ನು ಜಾಗ್ರತೆ ಮಾಡುವಿರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾನಾಗಲೇ ತಿಳಿಸಿದಹಾಗೆ ನಮ್ಮಲ್ಲಿ ದಾಸ್ತಾನು ಎಷ್ಟಿರುತ್ತದೋ ಅದನ್ನು ನೋಡಿಕೊಂಡು ಅದರ ಪ್ರಕಾರ ಹಂಚಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇಲ್ಲಿ ತಾವು ಸೂಚಿಸಿರುವ ಅಂಕಿಗಳ ಪೈಕಿ ಎಷ್ಟು ದವಸವನ್ನು ನಮ್ಮ ದೇಶದಿಂದ ಒದಗಿಸಲಾಯಿತು ಮತ್ತು ಎಷ್ಟನ್ನು ಹೊರಗಡೆಯಿಂದ ತರಿಸಲಾಯಿತು ಎಂಬುದನ್ನು ತಿಳಿಸುವಿರಾ ?

ಮಾನ್ಯ ಶ್ರೀ ಕೆ. ಚೆಂಗರರಾಯರೆಡ್ಡಿಯವರು — ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ನಮ್ಮ ದೇಶದಲ್ಲಿ ನಾವು ಬೆಳೆದಿದ್ದೆಷ್ಟು ಮತ್ತು ಸಾಲದೆ ಒಂದುದಕ್ಕೆ ಹೊರಗಡೆಯಿಂದ ಆಮದುಮಾಡಿಕೊಂಡಿದ್ದೆಷ್ಟೆಂಬುದನ್ನು ತಾವು ತಿಳಿಸುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಒಂದೊಂದು ವರ್ಷದಲ್ಲಿ ಒಂದೊಂದು ರೀತಿಯಾಗಿದೆ. ಒಂದೊಂದು ವರ್ಷ 75 ಲಕ್ಷ ಟನ್ ತರಿಸಲಾಗಿದೆ. ಒಂದೊಂದು ವರ್ಷ 1 ಲಕ್ಷ 25 ಸಾವಿರ ಟನ್ ತರಿಸಲಾಗಿದೆ. ಈ ಟನ್ನಿನ ಸಂಖ್ಯೆಯನ್ನು 10 ರಿಂದ ಗುಣಿಸಿದರೆ ಪಲ್ಲಾಗಳ ಲೆಕ್ಕ ಸಿಕ್ಕುತ್ತೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—1950ನೆಯ ಸಾಲಿಗೆ ತಾವು ಹೊರಗಡೆಯಿಂದ ತರಿಸಲಾದ ಧಾನ್ಯದ ಪ್ರಮಾಣವೆಷ್ಟು?

The Hon'ble Sri K. CHENGALARAYA REDDY.—Anywhere from 70,000 to 1,25,000 tons, varying from year to year according to the supply available from the Government of India and according to the demands we make on the Government of India.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಪಡಿತರ ಪದ್ಧತಿ ಇಲ್ಲದ ಪ್ರದೇಶದಲ್ಲಿ ಜನರಿಗೆ ಧಾನ್ಯದ ಅಭಾವ ಕಂಡುಬಂದಾಗ ತಾನೆ ತಾವು ಅವರಿಗೆ ರೇಷ್ಟ್ ಕಾರ್ಡುಗಳನ್ನು ಕೊಡುವುದು?

ಅಧ್ಯಕ್ಷರು.—ತಾವೀಗ ಕೇಳಿದ ವಿಷಯ ಯಾವುದು?

ಶ್ರೀ ಬಿ. ಹುಚ್ಚೇಗೌಡರು.—ತಾವು ಇಲ್ಲಿ ಸೂಚಿಸಿರುವ ಪ್ರಕಾರ 11 ಲಕ್ಷ ಜನಸಂಖ್ಯೆಗೆ 88 ಲಕ್ಷ ಚಿಲ್ಲರೆ ಪಲ್ಲದಷ್ಟು ಧಾನ್ಯ ಒದಗಿಸಿರುವಾಗ್ಯೆ, 44 ಲಕ್ಷ ಪ್ರಜಾಸಂಖ್ಯೆಗೆ 90 ಲಕ್ಷ ಚಿಲ್ಲರೆ ಪಲ್ಲ ದವಸ ಕೊಟ್ಟರೆ ಸಾಕೇ?

ಅಧ್ಯಕ್ಷರು.—ಅದು ಅಭಿಪ್ರಾಯದ ವಿಷಯವಾಯಿತು.

ಶ್ರೀ ಬಿ. ಹುಚ್ಚೇಗೌಡರು.—ನಾನು ಕೇಳುತ್ತಿರುವ ಪ್ರಶ್ನೆ 11 ಲಕ್ಷ ಜನಸಂಖ್ಯೆಯಿರುವ ಪ್ರದೇಶಕ್ಕೆ 86 ಸಾವಿರ ಪಲ್ಲ ಆಹಾರಧಾನ್ಯವನ್ನು ಸರಬರಾಯಿಮಾಡಿರುವಾಗ್ಯೆ, 44 ಲಕ್ಷ ಜನಸಂಖ್ಯೆ ಇರುವ ಪ್ರದೇಶಕ್ಕೆ 95 ಸಾವಿರ ಪಲ್ಲಾ ದವನವನ್ನು ಕೊಟ್ಟರೆ ಸಾಕಾಗುತ್ತದೆಯೆ, ಎಂದು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು. ಅದು ಮೊದಲೆಂದಲೂ ಬಂದಿರತಕ್ಕ ಪದ್ಧತಿಯೇ ಹೊರತು ಸೊಸದಾಗಿ ಮಾಡಿದ್ದೇನೂ ಅಲ್ಲ. ಕೆಲಕೆಲವು ಪ್ರದೇಶಗಳನ್ನು ಅಂದರೆ ಚಿನ್ನದಗಣಿ ಪ್ರದೇಶ, ದಾವಣಗೆರೆ, ಬೆಂಗಳೂರುನಗರ ಮುಂತಾದ ಕೆಲವು ಪ್ರದೇಶಗಳನ್ನು ಪಡಿತರ ಪ್ರದೇಶ ಎಂಬುದಾಗಿ ನಿರ್ಧರಮಾಡಿ ಅಲ್ಲರತಕ್ಕವರಿಗೆ 12 ಔನ್ಸ್ ಪ್ರಕಾರ ಆಹಾರ ಕೊಡಬೇಕೆಂಬುದಾಗಿ ಸರ್ಕಾರ ಮೊದಲಿಂದಲೂ ತೀರ್ಮಾನ ಮಾಡಿಕೊಂಡು ಬಂದಿದೆ. ಅದರ ಪ್ರಕಾರ ಅಲ್ಲರತಕ್ಕವರಿಗೆ ಅಷ್ಟನ್ನು ಕೊಡಲಾಗುತ್ತಿದೆ. ಇನ್ನುಳಿದ ನಾನ್ ರೇಷ್ಟ್ ಏರಿಯಾಕ್ಕೆ ಒಳಪಟ್ಟ ಗ್ರಾಮಾಂತರ ಪ್ರದೇಶಗಳಲ್ಲರತಕ್ಕವರಿಗೆ, ನಮ್ಮಲ್ಲರತಕ್ಕ ದಾಸ್ತಾನು ನೋಡಿಕೊಂಡು ಅದಕ್ಕನುಸಾರವಾಗಿ ಹಂಚಲಾಗುತ್ತದೆ. ಈ ನಾನ್ ರೇಷ್ಟ್ಡ್ ಏರಿಯಾದಲ್ಲರತಕ್ಕವರು ಸದಾ ಆಹಾರ ಸರಬರಾಯಿಯಾಗಬೇಕೆಂದೇನೂ ಕೇಳುವುದಿಲ್ಲ. ಕೆಲವು ವೇಳೆ ಅವರಿಗೆ ಈ ಆಹಾರ ಧಾನ್ಯಗಳ ಅವಶ್ಯಕತೆ ಒದಗಬಹುದು. ಆಗ್ಯೆ ನಾವು ನಮ್ಮಲ್ಲಿರತಕ್ಕ ದಾಸ್ತಾನು ನೋಡಿಕೊಂಡು ಅದನ್ನು ಅವರಿಗೆ ಹಂಚಿನುತ್ತೇವೆ. ಹೀಗೆ ಮಾಡತಕ್ಕದ್ದು ಮೊದಲಿನಿಂದಲೂ ಬಂದಿರತಕ್ಕ ಪದ್ಧತಿಯೇ ವಿನಾ ಹೊಸದಾಗಿ ಮಾಡಿದ್ದೇನೂ ಅಲ್ಲ. ಈಗ ನಮ್ಮಲ್ಲಿರತಕ್ಕ ದಾಸ್ತಾನು ನೋಡಿಕೊಂಡು ಅದರ ಪ್ರಕಾರ ಎಲ್ಲರಿಗೂ ಹಂಚಿಕೆ ಮಾಡಲಾಗುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಜನರಲ್ಲಿದ್ದ ಹೆಚ್ಚು ಆಹಾರ ಧಾನ್ಯಗಳನ್ನು ತಾವು ಸರ್ಕಾರದ ವಶಕ್ಕೆ ತೆಗೆದುಕೊಂಡಮೇರೆ ಹಿಂದಿನಿಂದ ಯಾವ ಪದ್ಧತಿ ಜಾರಿಗೆ ತರಲಾಗಿದೆಯೋ ಅದರಂತೆ ಈಗಲೂ ಹಂಚುತ್ತಿದ್ದೇವೆಂದು ಹೇಳಿದರೆ ಹೇಗೆ ಸರಿಯಾಗುತ್ತೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲ ವಿಚಾರದಲ್ಲೂ ಹಿಂದೆ ಹೇಗೆ ಅನುಸರಿಸುತ್ತಿದ್ದರು ಎಂಬುದನ್ನು ನೋಡಿಕೊಂಡು ಈಗಿನ ಸಂದರ್ಭಕ್ಕೆ ತಕ್ಕ ರೀತಿ ಅನುಸರಿಸಲಾಗುತ್ತಿದೆ. ಅಷ್ಟೆ ಅಲ್ಲದೆ ಪ್ರತಿಯೊಬ್ಬರಿಗೂ ಇರತಕ್ಕ ಆಹಾರ ದಾಸ್ತಾನಿನ ಪ್ರಮಾಣ ನೋಡಿಕೊಂಡು, ಅದನ್ನೆ ಹಂಚಲಾಗುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಈಗ ತಾವು ಗ್ರಾಮಾಂತರ ಪ್ರದೇಶಗಳಿಗೆ ಹಂಚುತ್ತಿರುವ ಧಾನ್ಯ ಅಲ್ಲಿನ ಜನರಿಗೆ ಸಾಕಾಗುತ್ತದೆಂದು ಕಂಡುಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಂಡುಬಂದಿದೆ. ಹಾಗೆ ಸಾಲದೆ ಬಂದ ಕಡೆಗೆ ಅದನ್ನು ಒದಗಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನಿಂದಲೂ, ಗ್ರಾಮಾಂತರ ವಾಸಿಗಳಿಗೆ 6 ಔನ್ಸು, 3 ಔನ್ಸು ಕೊಡಲಾಗುತ್ತಿತ್ತು. ಈಗಲೂ ಸಹ ಅದೇರೀತಿ ಅನುಸರಿಸಿಕೊಡಲಾಗುತ್ತಿದೆಯೆಂದು ಹೇಳಿದಿರಿ. ಇಷ್ಟು ಆಹಾರ ಅವರಿಗೆ ಸಾಕಾಗುತ್ತದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ಇರುವುದನ್ನೆಲ್ಲಾ ಒಂದು ದಾಮಾಷದಲ್ಲಿ ಹಂಚಲಾಗುತ್ತಿದೆ. ತಾವು ಕೇಳುವ ರೀತಿ ಬದಲಾಯಿಸಲು ಸಧ್ಯಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಹಂಚುವಾಗ ಪಟ್ಟಣ ಮತ್ತು ಗ್ರಾಮಾಂತರಗಳಲ್ಲಿ ಒಂದೇ ಸಮನಾಗಿ ಹಂಚಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇದೆ, ಆದರೆ ಸಾಧ್ಯವೇ, ಅಸಾಧ್ಯವೆ ಎಂಬುದನ್ನು ನೋಡಿ ಮುಂದುವರಿಯಬೇಕು.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಕಾನೂನು ಬದ್ಧವಲ್ಲದ ರೇಷನಿಂಗ್ ಏರ್ಪಾಡು ಜಾರಿಯಲ್ಲರುವ ಪ್ರದೇಶದಲ್ಲಿ ಈಗ ರೇಷ್ಟ್ ಕೊಡುತ್ತಿರುವವರ ಜೊತೆಗೆ ಬೆಳೆದಿರುವವರನ್ನೂ ಸೇರಿಸಿದರೆ ಕಾನೂನು ಬದ್ಧವಾದ ರೇಷನಿಂಗ್ ಏರ್ಪಾಡು ಜಾರಿಯಲ್ಲರುವ ಪ್ರದೇಶದ ಜನಸಂಖ್ಯೆಗೆ ಸಮನಾಗಬಹುದಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕಿಂತ ಜಾಸ್ತಿಯಾಗಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಕಾನೂನು ಬದ್ಧವಾದ ರೇಷನಿಂಗ್ ಏರ್ಪಾಡು ಜಾರಿಯಲ್ಲರುವ ಪ್ರದೇಶದಲ್ಲಿ 195 ನೆಯ ಜನವರಿಯಿಂದ 1950ನೆಯ ಡಿಸೆಂಬರ್‌ವರೆಗೆ ಅರವತ್ತು ಸಾವಿರ ಜನರು ಹೆಚ್ಚಿದ್ದಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂಕಿ ಅಂಶಗಳನ್ನು ನೋಡಿದರೆ ಅದು ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ತಿಂಗಳೊಂದಕ್ಕೆ ಕಾನೂನು ಬದ್ಧವಾದ ರೇಷನಿಂಗ್ ಇರುವ ಪ್ರದೇಶದಲ್ಲಿ ಐದು ಸಾವಿರ ಪ್ರಜಾ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಕಾರಣವೇನು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಲ್ಲಿ 12 ಔನ್ಸ್ ರೇಷ್ ಕೊಡುತ್ತಿರುವುದು ಒಂದು ಕಾರಣ ಇರಬಹುದು. ರೇಷ್ ಹೆಚ್ಚಾಗಿ ಸಿಕ್ಕುತ್ತದೆಂದು ಅನೇಕರು ಅಲ್ಲಿಗೆ ಬರುತ್ತಿರಬಹುದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕಾನೂನು ಬದ್ಧವಲ್ಲದ ರೇಷನಿಂಗ್ ಇರುವ ಪ್ರದೇಶದಲ್ಲಿ ಸುಮಾರು 40 ಲಕ್ಷ ಜನರಿಗೆ ಕಾರ್ಡು ಕೊಟ್ಟಿರಬಹುದು. ಅವರಿಗೆ ಊಟಕ್ಕೆ ಅನ್ನವಿಲ್ಲವೆಂದು ತಾನೆ ತಾವು ಆ ರೀತಿ ಮಾಡಿರುವುದು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು. ಎಷ್ಟು ಬೇಕೋ ಅಷ್ಟನ್ನು ಬೆಳೆಯದಿರುವವರಿಗೆ ಮತ್ತು ವ್ಯವಸಾಯಗಾರರಲ್ಲದವರಿಗೆ ಕಾರ್ಡು ಕೊಟ್ಟಿದೆ

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಕಾರ್ಡು ಕೊಡುವುದಕ್ಕೆ ಮುಂಚೆ ಅವರಿಗೆ ಊಟಕ್ಕಿಲ್ಲವೆಂದು ನಿರ್ಧರಮಾಡಿ ತಾನೆ ಕೊಟ್ಟಿರುವುದು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

ಶ್ರೀ ಎಚ್. ಎಂ ಚೆನ್ನಬಸಪ್ಪನವರು.—ಅಂದ ಮೇಲೆ ಅವರಿಗೆ ಊಟಕ್ಕೆ ತಕ್ಕಷ್ಟು ಪ್ರಮಾಣವನ್ನು ಕೊಡದೆ ಹೋದರೆ ಯಾವ ರೀತಿ ಅವರು ಜೀವನ ಮಾಡಲು ಸಾಧ್ಯ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕೆಂಬುದನ್ನು ಗೊತ್ತು ಮಾಡಿ ಅವರಿಗೆ ಕೊಡುತ್ತಿದ್ದೇವೆ.

Mr. SPEAKER.—Is not the Hon'ble Member carrying on a discussion? He can just note down the figures now and take some other opportunity to discuss.

Sri H. M. CHANNABASAPPA.—I should like to know from the Government whether they have assured themselves that those persons are being given the food that they are entitled to when the ration cards are given to them.

ಕಾರ್ಡು ಕೊಟ್ಟಿರುವುದು ಅವರಿಗೆ ಅನ್ನವಿಲ್ಲವೆಂದು. ಇದುವರೆಗೆ ಹತ್ತು ಲಕ್ಷ ಮಂದಿಗೆ ಕೊಡುವ ದವನವನ್ನು 40 ಲಕ್ಷ ಜನರಿಗೆ ಕೊಟ್ಟಿದೆ. ಹಾಗಿರುವಾಗ ಅವರು ಯಾವ ರೀತಿ ಜೀವನಮಾಡಿಕೊಂಡಿದ್ದಾರೆಂಬುದನ್ನು ಪರಿಶೀಲಿಸಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕೆ ಆಗಲೇ ಉತ್ತರ ಹೇಳಿದೆ. ಹಳ್ಳಿಗಳಲ್ಲಿ ಬೆಳೆದಿರುವ ಧಾನ್ಯವೂ ಇರುವುದರಿಂದ ಅವರು ನಾವು ಕೊಡುವುದರ ಜೊತೆಗೆ ಅದನ್ನೂ ಉಪಯೋಗಿಸಿಕೊಳ್ಳಬಹುದು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—ಅವರು ಬೆಳೆದಿರುವುದು ತೀರಿ ಹೋದ ಮೇಲೆ ತಾನೆ ಅವರಿಗೆ ತಾವು ಕಾರ್ಡು ಕೊಡುವುದು ?

The Hon'ble Sri K. CHENGALARAYA REDDY.—Not necessarily.

Sri H. M. CHANNABASAPPA.—So shall I take it that the Government are issuing cards even to those people who have got grains ?

The Hon'ble Sri K. CHENGALARAYA REDDY.—No. Not for the people who have got grains for the whole year, but for the people whose produce gets exhausted in the course of the year. It is only to such people that cards are given.

Sri H. M. CHANNABASAPPA.—Will the Government issue cards to the people who have got grains in their houses and yet apply for cards ?

The Hon'ble Sri K. CHENGALARAYA REDDY.—No.

Sri H. M. CHANNABASAPPA.—Then it follows that you issue cards for only such people who have no food grains in their houses. Will the Government investigate as to how such people are securing food grains ?

The Hon'ble Sri K. CHENGALARAYA REDDY.—For people who have no food grains, grains are given in the food depots.

Sri H. M. CHANNABASAPPA.—That is only one-fourth. How are they making good the other three-fourths of the food grains ?

The Hon'ble Sri K. CHENGALARAYA REDDY.—Hon'ble Members are aware that so far as agricultural labourers are concerned many of them are expected to be given their wages in kind by the landholders themselves.

ವ್ಯವಸಾಯದ ಕೆಲಸ ಮಾಡುವ ಕೂಲಿಗಳಿಗೆ, ವ್ಯವಸಾಯಗಾರರು ಮುಂತಾದವರಿಗೆ ಎಷ್ಟು ಕೊಡಬೇಕು ಎಂಬುದಕ್ಕೆ ಲೆಕ್ಕವಿದೆ. ಅದರಂತೆ ನರಬರಾಯಿ ಮಾಡುತ್ತಿದೆ. ಇದರ ಜೊತೆಗೆ ಅವರು ಬೆಳೆದಿರುವುದೂ ಇರುತ್ತದೆ. ಈ ದೃಷ್ಟಿಯಿಂದ ಕಾರ್ಡು ಕೊಡುವಾಗ ಸಂಪೂರ್ಣವಾಗಿ ಎಲ್ಲವನ್ನೂ ಕೊಡಬೇಕೆಂಬ ಆಧಾರದ ಮೇಲೆ ಕೊಡುತ್ತಿಲ್ಲ. ಎಷ್ಟು ಬೇಕು, ಎಷ್ಟು ಕೊಡಲು ಅನುಕೂಲವಿದೆ ಎಂಬುದನ್ನು ನೋಡಿ ಅದರಂತೆ ಕೊಡುವ ಒಂದು ಪದ್ಧತಿಯಿದೆಯೇ ಹೊರತು ಕಾನೂನು ಬದ್ಧವಾದ ರೇಷನಿಂಗ್ ಪದ್ಧತಿಯಂತೆ ಇಷ್ಟೇ ಕೊಡಬೇಕೆಂದು ಕೊಡುತ್ತಿಲ್ಲ.

Sri H. M. CHANNABASAPPA.—Are the Government aware that such discrimination is against the spirit of the Constitution ?

The Hon'ble Sri K. CHENGALARAYA REDDY.—I do not know about it.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).— ರೇಪಸಿಂಗ್ ಜಾರಿಯಲ್ಲಿರುವ ಪ್ರದೇಶಕ್ಕೆ ಧಾನ್ಯ ಸರಬರಾಯಿ ಮಾಡುತ್ತಿರುವುದು ಸಾಲದು ಎಂದು ತಾವು ಒಪ್ಪಿದ್ದೀರಿ. ಆರೀತಿಯಾಗಿ ಸಾಲದಿರುವ ರೇಷ್ಟ್ ಅವರು ಹೇಗೆ ಒದಗಿಸಿಕೊಳ್ಳಬೇಕು ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ತಾವು ಕೇಳುವುದು ಪಟ್ಟಣಗಳಿಗೆ ಸಂಬಂಧಪಟ್ಟಿರುವುದೆ ?

ಶ್ರೀ ಟಿ. ಸಿ. ಹೊನ್ನಪ್ಪನವರು.—ಹೌದು.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಈಗ ಅಲ್ಲಿ ಕೊಡುತ್ತಿರುವುದು ಕಡಿಮೆಯೆಂದು ನಾನು ಹೇಳಲಿಲ್ಲ. ಹಿಂದೆ ಕೊಡುತ್ತಿದ್ದುದನ್ನು ಹೆಚ್ಚಿಸಿ ಈಗ 12 ಔನ್ಸ್ ಕೊಡುತ್ತಿದೆ. ಅದು ಸಾಲದು ಎಂದು ನಾನು ಹೇಳಲಾರೆ.

Gradual Decontrol of Foodgrains.

Q. 56.—**Sri S. KARIAPPA** (Bangalore District—General).—

Will the Government be pleased to state.—

(a) whether they have thought of gradual decontrol of foodgrains ;

(b) the utmost period they may require for the complete decontrol of the same ?

A.—**The Hon'ble Sri K. CHENGALARAYA REDDY** (Chief Minister).—

(a) and (b) Food Control which is an off-shoot of the Essential Supplies (Temporary Powers) Act, 1946, is a Central subject. There is no indication as to what the Central Government intends doing in regard to decontrol.

ಶ್ರೀ ಎಸ್. ಕರಿಯಪ್ಪನವರು.—ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ಕ್ರಮೇಣ ತಪ್ಪಿಸಬೇಕೆಂಬ ಉದ್ದೇಶವಿದೆಯೆಂದು ಸರ್ಕಾರದವರು ಹಿಂದೆ ಎಂದೂ ಹೇಳಿರಲಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕ್ರಮೇಣ ಸಡಿಲ ಮಾಡಬೇಕೆಂಬ ಉದ್ದೇಶವಿದೆ. ಕೇಂದ್ರ ಸರ್ಕಾರಕ್ಕೂ ಸಹ ಅದೇ ಅಭಿಪ್ರಾಯವಿದೆ. ಅದೇ ರೀತಿ ಮಾಡುವವರಾಗಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಈಗ ಮೈಸೂರು ದೇಶದಲ್ಲಿ ಹತೋಟಿಯನ್ನು ಕ್ರಮೇಣ ಸಡಲಿಸುವ ಅಥವಾ ಪೂರ್ತಿಯಾಗಿ ತೆಗೆದು ಹಾಕುವ ವಿಚಾರದಲ್ಲಿ ರಿಯಾಯಿತಿ ತೋರಿಸಬೇಕೆಂದು ಇಂಡಿಯಾ ಸರ್ಕಾರವನ್ನು ನಮ್ಮ ಸರ್ಕಾರದವರು ಕೇಳಲಿಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕೇಳಿದೆ. 30 ಸೇರು ದವನವನ್ನು ಸಂಸ್ಥಾನದೊಳಗೆ ಮಾತ್ರ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸಲು ಅವಕಾಶವನ್ನು ಕೊಡುವ ವಿಚಾರದಲ್ಲಿ ಕೇಂದ್ರ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿ ಆ ಅನುಕೂಲವನ್ನು ಕಲ್ಪಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಪೂರ್ತಿಯಾಗಿ ಹತೋಟಿಯನ್ನು ತೆಗೆಯುವ ವಿಚಾರದಲ್ಲಿ ಇಂಡಿಯಾ ಸರ್ಕಾರದೊಡನೆ ಏನಾದರೂ ಪ್ರಸ್ತಾಪ ಮಾಡಿದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅನೇಕ ಸಲ ಕಾನ್ಫರೆನ್ಸುಗಳಲ್ಲಿ ಈ ವಿಷಯ ಚರ್ಚೆಯಾಗಿದೆ. ದೆಹಲಿಯಲ್ಲಿ ನಡೆದ ಆಹಾರ ಇರಾಖೆ ಮಂತ್ರಿಗಳ ಸಮ್ಮೇಳನದಲ್ಲೂ ಇದು ಚರ್ಚೆಯಾಗಿದೆ, ರಾಜಕೀಯ ಪಕ್ಷಗಳಲ್ಲೂ ಚರ್ಚೆಯಾಗಿದೆ, ಹತೋಟಿಯನ್ನು ತಪ್ಪಿಸುವ ವಿಚಾರದಲ್ಲಿ ಅಭಿಪ್ರಾಯಗಳು ಅನೇಕ ಸಲ ಬಂದಿವೆ. ಆದರೆ ಹಾಗೆ ಹತೋಟಿ ತೆಗೆಯುವುದಕ್ಕೆ ಮುಂಚೆ ಕೆಲವು ಷರತ್ತುಗಳನ್ನು ಗಮನಿಸಿ ಅವು ನೇರವೇರಿದರೆ ಹಾಗೆ ಮಾಡಬಹುದು. ಯಾವುದೋ ಒಂದು ಆಧಾರ ಅಥವ ತತ್ವದ ಮೇರೆ ಹತೋಟಿ ತೆಗೆಯುವುದಕ್ಕಾಗುವುದಿಲ್ಲ ಎಂಬ ಅಭಿಪ್ರಾಯವಿದೆ. ಹಾಗೆ ಮಾಡಬೇಕಾದರೆ ದಾಸ್ತಾನು ಸ್ವಲ್ಪ ಇರಬೇಕು, ಬೆಳೆ ಚೆನ್ನಾಗಿರಬೇಕು. ಅಂಥ ನಿರ್ದಿಷ್ಟದಲ್ಲಿ ಮಾಡಿದರೆ ಪ್ರಯೋಜನ ಹೆಚ್ಚು, ಇಲ್ಲದಿದ್ದರೆ ತೊಂದರೆ ಎಂದು ಭಾರತ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ನಮ್ಮ ಅಭಿಪ್ರಾಯವನ್ನು ಭಾರತ ಸರ್ಕಾರಕ್ಕೆ ಖಚಿತವಾಗಿ ತಿಳಿಸಿದೆ. ಯಾವ ಸಂಸ್ಥಾನವೇ ಆಗಲಿ ತನ್ನದೇ ಆದ ಒಂದು ನೀತಿಯನ್ನು ಮುಂದುವರಿಸುವುದಕ್ಕೆ ಕಾನೂನು ಪ್ರಕಾರ ಕಷ್ಟವಾಗಿದೆಯೆಂದು ನಾನು ಉತ್ತರದಲ್ಲಿ ಸಂಕ್ಷೇಪವಾಗಿ ತಿಳಿಸಿದ್ದೇನೆ.

ಶ್ರೀ ಎಸ್. ಕರಿಯಪ್ಪನವರು.—ಈ ಬಗೆಯ ರಿಯಾಯಿತಿಯು ಮತ್ತಾವ ಸಂಸ್ಥಾನಕ್ಕೂ ಬಂದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಆಹಾರ ಧಾನ್ಯಗಳ ಮೇಲಿನ ಹತೋಟಿಯು, ಸೌಕರ್ಯ ಕಲ್ಪನೆಗೆ ಅತ್ಯಾವಶ್ಯಕವಾಗಿ ಬೇಕಾಗುವ ಸರಬರಾಯಿಗಳಿಗೆ ಸಂಬಂಧಪಟ್ಟ 1946ನೆಯ ಇಸವಿಯ ಆಕ್ಟಿನ ಅಂಗವಾಗಿರುತ್ತದೆ ಎಂದು ಹೇಳಿದ್ದೀರಿ.....

Mr. SPEAKER.—That is the heading of the Act.

ಶ್ರೀ ಎಸ್. ಕರಿಯಪ್ಪನವರು.—ಈಗ ಅಂಥ ಸೌಕರ್ಯಗಳು ಇರುವುದರ ಜೊತೆಗೆ ಕೆಲವು ಅನಾನುಕೂಲಗಳೂ ಇವೆ ಎಂಬುದು ಗೊತ್ತೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅನಾನುಕೂಲ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಅವು ಯಾವುವು ಎಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಮುಖ್ಯವಾಗಿ ಅನಾನುಕೂಲಗಳು ಎಂದರೆ, ಸಾಕಾದಷ್ಟು ಸರಬರಾಯಿ ಆಗುತ್ತಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಈಗ ತಾನೆ ಹೇಳಿದ್ದಾರೆ; ಆಡಳಿತ ನಡೆಸುತಕ್ಕ ನಿರ್ದಿಷ್ಟದಲ್ಲಿ ಕಿರುಕುಳ ಇದೆ ಎಂಬ ಇನ್ನೊಂದು ಆಕ್ಷೇಪಣೆ ಇದ್ದೇ ಇದೆ. ಬ್ಲಾಕ್ ಮಾರ್ಕೆಟ್ ಆಗುತ್ತಾ ಇದೆ ಎಂಬುದು ಮತ್ತೊಂದು ಆಕ್ಷೇಪಣೆ. ಹೀಗೆ ನಾನಾ ಅನಾನುಕೂಲಗಳಿವೆಯೆಂದು ಸರ್ಕಾರದವರ ಗಮನಕ್ಕೆ ಬಂದಿದೆ; ಬಾರದೇ ಇಲ್ಲ. ಹತೋಟಿ ತೆಗೆದು ಹಾಕಿದರೆ ಏನು ಅನಾನುಕೂಲವಾಗಬಹುದು ಎಂಬುದನ್ನು ಗಮನಿಸಿ ಯಾವ ನೀತಿ ಅನುಸರಿಸಿದರೆ ಒಟ್ಟನಲ್ಲಿ ಜನಗಳಿಗೆ ಅನುಕೂಲವಾಗುತ್ತದೆಯೆಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ.